ಈ) ಇವರ ಸೇವೆಯನ್ನು ಖಾಯಂಗೊಳಿಸಲು ಸರ್ಕಾರವು ತೀರ್ಮಾನಿಸಿಲ್ಲ. ಆದರೆ ಇವರಿಗೆ ಯಾವ ರೀತಿಯಲ್ಲಿ ಸಹಾಯ ಮಾಡಬಹುದೆಂಬ ಬಗ್ಗೆ ಪರಿಶೀಲಿಸಲಾಗುತ್ತಿದೆ.

4308 (4783) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ್ (ಗುಲ್ಬರ್ಗಾ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಮಹಾನಗರಕ್ಕೆ ನಿರ್ಮಲ ಯೋಜನೆಯಲ್ಲಿ ಬಿಡುಗಡೆಯಾಗಿರುವ ಹಣವೆಷ್ಟು;

ಆ) ನಿರ್ಮಲ ಯೋಜನೆಯಲ್ಲಿ ಕೈಗೆತ್ತಿಕೊಂಡ ಕಾಮಗಾರಿಗಳ ಹೆಸರು ಹಾಗೂ ಸ್ಥಳದ ವಿವರ ನೀಡುವುದು;

ಇ) ಈ ನಿರ್ಮಲ ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡ ಕಾಮಗಾರಿಯ ಪ್ರಗತಿ ಯಾವ ಹಂತದಲ್ಲಿ ಇದೆ (ಸಂಪೂರ್ಣ ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ರೂ.142.21 ಲಕ್ಷಗಳು.

ಆ) ಈ ಯೋಜನೆಯಡಿ 3 ವಾಣಿಜ್ಯ ಹಾಗೂ 3 ಕೊಳಚೆ ಪ್ರದೇಶಗಳಲ್ಲಿ ಸಾರ್ವಜನಿಕ ಶೌಚಾಲಯದ ಕಾಮಗಾರಿ ಕೈಗೊಳ್ಳಲಾಗಿರುತ್ತದೆ. 1) ಮಹತ್ತರಗಲ್ಲಿ 2) ಜಿಲನಾಬಾದ ಕಾಲೋನಿ. 3) ರಾಜೀವಗಾಂಧಿ ನಗರ 4) ರಾಜಾಪುರ ಕಾಲೋನಿ 5) ಜನರಲ್ ಹಾಸ್ಪಿಟಲ್ ಹತ್ತಿರ 6) ಮಿನಿ ವಿಧಾನ ಸೌಧ ಕಾಂಪೌಂಡ್.

ಇ) 6 ಶೌಚಾಲಯಗಳ ಪೈಕಿ 3 ಶೌಚಾಲಯಗಳ ಕಾಮಗಾರಿ ಮುಕ್ತಾಯ ಗೊಂಡಿದ್ದು, ಉಳಿದ 3 ಶೌಚಾಲಯಗಳ ಕಾಮಗಾರಿ ಮುಕ್ತಾಯದ ಹಂತದಲ್ಲಿರುತ್ತದೆ.

4309 (4438) ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) :– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಭಾಗ್ಯ ಜಲನಿಗಮದ ವ್ಯಾಪ್ತಿಯಲ್ಲಿ ಬರುವ ಸಂಗಮ ಕ್ರಾಸ್‌ನಿಂದ ಆಲಮಟ್ಟಿವರೆಗಿನ ರಸ್ತೆಯು ತೀರಾ ದುರವಸ್ಥೆಯಲ್ಲಿದ್ದು,

ಜನಸಂಚಾರ, ವಾಹನ ಸಂಚಾರಗಳಿಗೆ ಯೋಗ್ಯವಾಗಿಲ್ಲವೆಂಬುದನ್ನು ಸರ್ಕಾರ ಗಮನಿಸಿದೆಯೇ;

ಆ) ಹಾಗಿದ್ದಲ್ಲಿ, ಅದರ ಸುವ್ಯವಸ್ಥೆಗಾಗಿ ಮತ್ತು ಸಂಚಾರ ಯೋಗ್ಯ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರದ ಕ್ರಮಗಳೇನು;

ಇ) ಕೃಷ್ಣಾ ಭಾಗ್ಯ ಜಲನಿಗಮದ ವ್ಯಾಪ್ತಿಗೆ ಬರುವ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕಾಲನಿಗದಿತ ಕ್ರಮವನ್ನು ಜರುಗಿಸುವರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ), ಆ) ಮತ್ತು ಇ) ಗಮನಕ್ಕೆ ಬಂದಿದೆ.

ಕೃಷ್ಣಾ ಭಾಗ್ಯ ಜಲನಿಗಮದಡಿಯಲ್ಲಿ ಬರುವ ಆಯ್ದ ಅಚ್ಚುಕಟ್ಟು/ಯೋಜನಾ ರಸ್ತೆಗಳ ಪುನರ್ ವ್ಯವಸ್ಥೆ ಹಾಗೂ ನಿರ್ವಹಣೆಗಾಗಿ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಇದರಡಿಯಲ್ಲಿ ಸಂಗಮ ಕ್ರಾಸ್‌ನಿಂದ ಆಲಮಟ್ಟಿಯವರೆಗಿನ ರಸ್ತೆಯು ಕೂಡ ಸೇರಿರುತ್ತದೆ. ಪುನರ್ ವ್ಯವಸ್ಥೆಗಾಗಿ ಒಂದೂವರೆ ವರ್ಷದ ಕಾಲಾವಧಿ ಹಾಗೂ ನಂತರದ ನಿರ್ವಹಣೆಗಾಗಿ ನಾಲ್ಕು ವರ್ಷಗಳ ಕಾಲಾವಧಿ ನಿಗದಿಪಡಿಸಲಾಗಿದೆ.

4310 (5342) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) :– ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ನ್ಯಾಯಾಲಯಗಳು ಯಾವುವು;

ಆ) ಇವುಗಳಲ್ಲಿ ಎಷ್ಟು ಸ್ವಂತ ಕಟ್ಟಡ ಹೊಂದಿವೆ;

ಇ) ಸ್ವಂತ ಕಟ್ಟಡ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;

ಈ) ಸ್ವಂತ ಕಟ್ಟಡ ನೀಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಸಿವಿಲ್ ಜಡ್ಜ್ (ಕಿ.ವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ